**ಕರ್ನಾಟಕಸರ್ಕಾರ**

**ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

**ರಾಷ್ಟ್ರೀಯ ಸೇವಾ ಯೋಜನೆ**

ಸಂಖ್ಯೆ: ಪಪೂಶಿಇ/ರಾಸೇಯೋ/60/2018-19 ದಿನಾಂಕ: 23-08-2018

**ಜ್ಞಾಪನ**

**ವಿಷಯ** : ಪ್ರಕೃತಿ ವಿಕೋಪಕ್ಕೆ ಒಳಗಾದ ಕೊಡಗಿಗೆ ಎನ್.ಎಸ್.ಎಸ್. ಘಟಕ ಹೊಂದಿರುವ ಕಾಲೇಜಿನವರು ಪುನರ್ ವ್ಯವಸ್ಥೆಗೆ ಸಹಕಾರ ನೀಡುವ ಬಗ್ಗೆ.

**ಉಲ್ಲೇಖ:** ಸಂಖ್ಯೆ:ಯುಸೇಇ/ರಾಸೇಯೋ/ 2018-19/ 162 ದಿನಾಂಕ: 21-08-2018

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕವಾಗಿ ಮತ್ತು ಪ್ರಾಕೃತಿಕವಾಗಿ ಕೊಡಗು ಕರ್ನಾಟಕದ ಜೀವನಾಡಿಯಾಗಿದ್ದು, ಕರ್ನಾಟಕ ಸಂಸ್ಕೃತಿಗೆ ಹೆಮ್ಮೆಯನ್ನು ತಂದಿದೆ. ಅದರಲ್ಲೂ ಭಾರತೀಯ ರಕ್ಷಣಾ ವ್ಯವಸ್ಥೆಗೆ ಈ ಜಿಲ್ಲೆಯ ಯೋಧರು ನೀಡಿದ ಕೊಡುಗೆ ಅಪೂರ್ವವಾದುದು, ಈ ದೃಷ್ಟಿಯಿಂದ ಇಂತಹ ಸಂಕಟದ ಸಮಯದಲ್ಲಿ ರಾಸೇಯೋಯ ಕಾಲೇಜುಗಳು ಸ್ವಯಂ ಪ್ರೇರಿತರಾಗಿ ಪುನರ್ ವ್ಯವಸ್ಥೆಗೆ ಸಂಬಂಧಿಸಿದಂತೆ ನಿಧಿ ಸಂಗ್ರಹ ಮಾಡಬಹುದಾಗಿದೆ, ಕಾಲೇಜುಗಳಿಂದ ಪ್ರಾಂಶುಪಾಲರ ಅನುಮತಿ ಪಡೆದು ಸಂಯೋಜನಾಧಿಕಾರಿ ಅಥವಾ ಯೋಜನಾಧಿಕಾರಿಗಳ ನೇತೃತ್ವದಲ್ಲಿಯೇ ನಿಧಿ ಸಂಗ್ರಹ ಮಾಡಬೇಕು. ಸಂಗ್ರಹಿಸಿದ ನಿಧಿಯನ್ನು ಮುಖ್ಯ ಮಂತ್ರಿ ಇವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018 ಇದರ ಖಾತೆ ಸಂಖ್ಯೆ 37887098605 (ಐಎಫ್ಎಸ್‌ಸಿ ಕೋಡ್ ನಂ.: ಎಸ್‌ಬಿಐಎನ್0040277, ಎಂಐಸಿಆರ್ ಸಂಖ್ಯೆ: 560002419) ಈ ನಿಧಿಗೆ ತೆರಿಗೆ ಕಾಯಿದೆ 80ಜಿ ಅಡಿ ಪೂರ್ಣ ತೆರಿಗೆ ವಿನಾಯಿತಿ ಇದೆ. ಸಂಯೋಜನಾಧೀಕಾರಿ ಮತ್ತು ಯೋಜನಾಧಿಕಾರಿಗಳು ಪಾರದರ್ಶಕವಾಗಿ ನಿಧಿ ಸಂಗ್ರಹಿಸುವ ಕಡೆಗೆ ಮಾರ್ಗದರ್ಶನ ಮಾಡತಕ್ಕದ್ದು.

1. ನಿಧಿ ಸಂಗ್ರಹಿಸಿ ಮುಖ್ಯ ಮಂತ್ರಿಗಳ ಖಾತೆಗೆ ಜಮಾ ಮಾಡಿರುವ ಬಗ್ಗೆ ನಿರ್ದೇಶನಾಲಯ ಮತ್ತು ಈ ಕಛೇರಿಗೆ ಖಡ್ಡಾಯವಾಗಿ ಮಾಹಿತಿ ನೀಡುವಂತೆ ಸೂಚಿಸತಕ್ಕದ್ದು.
2. ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಸಂಬಂಧಿಸಿದ ಜಿಲ್ಲಾಡಳಿತ/ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳ/ ಕಾಲೇಜುಗಳ ಮೂಲಕ ಕೊಡಗು ಜಿಲ್ಲಾಡಳಿತಕ್ಕೆ ಕಳುಹಿಸಿಕೊಡಬಹುದಾಗಿದೆ.
3. ಪರಿಸ್ಥಿತಿ ಯಥಾಸ್ಥಿತಿಗೆ ಬಂದ ಬಳಿಕ ಹತ್ತಿರದ ನಿರ್ದೇಶನಾಲಯ ಹಾಗೂ ಕಾಲೇಜುಗಳು ಪುನರ್ ವ್ಯವಸ್ಥೆ ಮತ್ತು ಶ್ರಮದಾನ ಕಾರ್ಯಕ್ರಮಗಳನ್ನು ಸ್ವಯಂ ಸೇವಕರ ಮೂಲಕ ನಿರ್ದೇಶನಾಲಯಗಳು ಈ ಕುರಿತು ತೊಡಗಿಸಿಕೊಳ್ಳುವ ಬಗ್ಗೆ ಯೋಜನೆಯನ್ನು ರೂಪಿಸಬಹುದಾಗಿದೆ. ಶಿಬಿರಗಳ ಮೂಲಕ ಸಹಕಾರ ನೀಡಬಹುದಾಗಿದೆ. ಹಾಗೂ ಪುನರ್ ವ್ಯವಸ್ಥೆಗೆ ಬಳಸಿಕೊಳ್ಳಲು ಕೋರಲಾಗಿದೆ.

4. 2018–19ರ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಸಂದರ್ಭಾನುಸಾರವಾಗಿ ಗರಿಷ್ಠ ಕಾರ್ಯಕ್ರಮಗಳನ್ನು ಎನ್.ಎಸ್.ಎಸ್ ರಾಜ್ಯ ಕೋಶ ಮತ್ತು ಎನ್.ಎಸ್.ಎಸ್. ನಿರ್ದೇಶನಾಲಯದಡಿಯಲ್ಲಿರುವ ಕಾಲೇಜುಗಳು ಕೊಡಗಿನಲ್ಲಿ ನಡೆಸಲು ಕ್ರಮ ಕೈಗೊಳ್ಳಲು ಕೋರಲಾಗಿದೆ.
5. ಕೇರಳ ರಾಜ್ಯವು ಪ್ರಕೃತಿ ವಿಕೋಪಕ್ಕೆ ಒಳಗಾಗಿದ್ದು, ಮಾನವೀಯ ನೆಲೆಯಲಿ ಗರಿಷ್ಠ ಸಹಕಾರವನ್ನು ನೀಡಬೇಕಾಗಿ ಕೋರಲಾಗಿದೆ.

ಇಂತಿ ತಮ್ಮ ವಿಶ್ವಾಸಿ

Geeetha Reddy PA

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳು:

1. ಡಾ: ಗಣನಾಥ ಶೆಟ್ಟಿ, ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,ಎನ್.ಎಸ್.ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
2. ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳು
3. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು.
4. ಸಹಾಯಕ ನಿರ್ದೇಶಕರು, ಇ–ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.